# ಶೌಚ ಮತ್ತು ಕಾಯಕ

ಮಹಾತ್ಮ ಗಾಂಧಿಯವರ ಜನ್ಮದಿನದಂದು ಪ್ರಾರಂಭವಾದ ಸ್ವಚ್ಛತಾ ಆಂದೋಲನದ ಅಬ್ಬರ ದೇಶದೆಲ್ಲೆಡೆ ಹಬ್ಬಿ ಚರ್ಚೆಗೆ ಗ್ರಾಸವಾಗಿದೆ. ಎಲ್ಲರೂ ಎಲ್ಲ ಕೆಲಸವನ್ನು ಮಾಡಲಾಗದು ಎನ್ನುವ ತತ್ವ ಬೇರುಬಿಟ್ಟಿರುವ ನಮ್ಮ ಸಾಮಾಜಿಕ ಪರಿಸರದಲ್ಲಿ ಎಲ್ಲರೂ ಪೊರಕೆ ಹಿಡಿಯುತ್ತಿರುವುದು ವಿರೋಧಾಭಾಸವೆನಿಸದಿರದು. ಸ್ವತಃ ಗಾಂಧೀಜಿ ಪೊರಕೆ ಹಿಡಿದರು, ಮಲ ಗುಡಿಸಿದರು. ಅವೆಲ್ಲವೂ ಸಾಂಕೇತಿಕತೆಯಲ್ಲಿಯೆ ಪರ್ಯಾವಸನಗೊಂಡವು. ಕಾರಣ ಸ್ಪಷ್ಟವಾಗಿದೆ. ಇಲ್ಲಿ ಕಸ ಗುಡಿಸಲು ಒಂದು ಜಾತಿಯಿದೆ, ಮಲ ಬಳಿಯಲು ಇನ್ನೊಂದು. ಹೀಗೆ ಇನ್ನೂ ಅನೇಕ ಅಧೋಕಾರ್ಯಗಳಿಗೆ ಜಾತಿಗಳಿವೆ. ಹಾಗಾಗಿ ಕಸ ಕಂಡಾಗ, ದುರ್ವಾಸನೆ ಬಡಿದಾಗ ನಮ್ಮ ಜನ ಮೂಗು ಮುಚ್ಚಿಕೊಂಡು ಇನ್ನಾರನ್ನೋ ಶಪಿಸುತ್ತಾ ಮುಂದೆ ನಡೆಯುತ್ತಾರೆಯೆ ಹೊರತು ಸ್ವಚ್ಛತೆಗೆ ನೆರವಾಗುವ ಮನಸ್ಸು ಮಾಡುವುದು ಅನಿರೀಕ್ಷಿತ. ನಮ್ಮ ಸ್ವಚ್ಛತೆಗೆ ಸಾಕ್ಷೀಭೂತವಾಗಿ ಬೆಂಗಳೂರಿನ ಲಾಲ್‌ಬಾಗ್, ಕಬ್ಬನ್ ಪಾರ್ಕುಗಳನ್ನು ಭಾನುವಾರ ವಿಹಾರದ ಮರುಮುಂಜಾನೆ ನೋಡಬೇಕು. ಹೆಸರಿಗೆ ಕಸದ ಡಬ್ಬಿಗಳು ಬಾಯ್ದೆರೆದು ನಿಂತಿರುತ್ತವೆ. ಹಸಿರು ಹಾಸೆಲ್ಲವೂ ಕಾಗದದ ತಟ್ಟೆಗಳು, ಪ್ಲಾಸ್ಟಿಕ್ ಬಾಟಲ್‌ಗಳು, ಹಣ್ಣಿನ ಸಿಪ್ಪೆಗಳು, ತಿಂದುಳಿದ ಎಂಜಲು ಪದಾರ್ಥಗಳು ಚೆಲ್ಲಿ ರಾಡಿಯಾಗಿರುತ್ತದೆ. ಇದನ್ನು ಅಲ್ಲಿನ ನೌಕರರು ಸ್ವಚ್ಛಮಾಡುತ್ತಾರೆಂಬುದು ಜನರ ಗ್ರಹಿಕೆ.

ಅಮೆರಿಕದ ಪಾರ್ಕಿನಲ್ಲಿ ತನ್ನ ಮುದ್ದು ನಾಯಿ ಇಸ್ಸಿ ಮಾಡಿದರೆ ಅದನ್ನು ಟಿಸ್ಸ್ಯು ಪೇಪರಿನಲ್ಲಿ ಸುತ್ತಿ ಜಂಬದ ಚೀಲದೊಳಗಿಟ್ಟು ಕಸದ ಬುಟ್ಟಿ ಕಂಡಾಗ ಹೊರಹಾಕುವ ಶ್ವಾನವಿಹಾರಿಯ ನೆನಪಾಗುತ್ತಿದೆ. ಸ್ವಿಟ್ಜರ್ಲೆಂಡಿನ ಬೀದಿಯಲ್ಲಿ ಚಾಕೊಲೇಟನ್ನು ಬಾಯಿಗಿಳಿಸಿ ಆ ಪುಟ್ಟ ಪ್ಲಾಸ್ಟಿಕ್ ಹೊದಿಕೆಯನ್ನು ಹಾಕಲು ಕಸದ ಬುಟ್ಟಿ ಕಾಣದೆ ಕೋಟಿನ ಜೇಬಿಗಿಳಿಸಿದ ಸೂಟುಧಾರಿಯ ನೆನಪಾಗುತ್ತಿದೆ. ಕೆಲವು ಗುಣಗಳನ್ನು ಪರಿಸರವೇ ಕಲಿಸುತ್ತದೆ. ನಮ್ಮ ಪರಿಸ್ಥಿತಿಯೆ ಬೇರೆ!

ಸಂವಿಧಾನದತ್ತವಾಗಿ ಸರ್ಕಾರದ ಎಲ್ಲ ಹಂತದ ಕೆಲಸಗಳೂ ಎಲ್ಲರಿಗೂ ಮುಕ್ತವಾಗಿದೆ, ಅವರವರ ಅರ್ಹತಾನುಸಾರ ಎಲ್ಲರೂ ಯಾವ ಕೆಲಸವನ್ನಾದರೂ ಮಾಡಬಹುದು. ಹಾಗೆಯೇ ಮೇಲಿನಸ್ತರದ ಕೆಲಸಗಳನ್ನು ಎಲ್ಲರೂ ಮಾಡುತ್ತಿದ್ದಾರೆ ಕೂಡ. ಆದರೆ ಕೆಳಸ್ತರದ ಅಂದರೆ ಹೆಚ್ಚಾಗಿ ಶೌಚದ ಕೆಲಸಗಳಿಗೆ ಕೆಲವರಲ್ಲಿ ಹಿಂಜರಿಕೆಯಿದೆ. ಅವುಗಳನ್ನು ನಿರ್ದಿಷ್ಟ ಜಾತಿಗಳಿಗೆ ಅಂಟಿಸಿಬಿಟ್ಟಿರುವುದರಿಂದ, ಆ ಕೆಲಸಗಳು ಅವಮಾನದ ಜತೆಗೆ ಮೈಲಿಗೆಯನ್ನು ಮೆತ್ತಿಕೊಂಡಿರುವುದರಿಂದ ಮೇಲ್ಜಾತಿಯೆನಿಸಿಕೊಂಡವರು ಹಿಂಜರಿಯುತ್ತಾರೆ. ಕಚೇರಿಯಲ್ಲಿ ಶುಕ್ರವಾರದ ಪೂಜೆಯನ್ನು ಒಬ್ಬ ಬ್ರಾಹ್ಮಣ ಮಾಡುತ್ತಿದ್ದಾನೆಂದರೆ ಹಿಂಬದಿಯ ಪಾಯಿಖಾನೆಯನ್ನು ಒಬ್ಬ ಭಂಗಿ ತೊಳೆಯುತ್ತಿದ್ದಾನೆಂದೇ ಅರ್ಥ. ಈ ಅಸಹಜ ಸಾಮಾಜಿಕತೆಯನ್ನು ಖಂಡಿಸಿ ಕಾಯಕ ತತ್ವವನ್ನು ಪರಿಕಲ್ಪಿಸಿ ಕೈಲಾಸಕ್ಕೇರಿಸಿದ ಕೀರ್ತಿ ಬಸವಣ್ಣನಿಗೆ ಸಲ್ಲುತ್ತದೆ. 'ದೇವಸಹಿತ ಭಕ್ತ ಮನೆಗೆ ಬಂದೆಡೆ ಕಾಯಕವಾವುದೆಂದು ಬೆಸಗೊಂಡೆನಾದಡೆ ನಿಮ್ಮಾಣೆ! ನಿಮ್ಮ ಪುರಾತನರಾಣೆ! ತಲೆದಂಡ! ತಲೆದಂಡ!' ಎಂದು ಹೇಳುತ್ತಾನೆ. ಕಾಯ ಕಾಯಕವನ್ನು ಬದಲಿಸಿಕೊಳ್ಳುವ ಮೊದಲೆ ಕ್ರಾಂತಿಗೆ ಭಂಗ ತರಲಾಯಿತು. ಕಾಲ ಹಿಮ್ಮುಖವಾಗಿ ಚಲಿಸಿತು.

ಈಗ ಸರ್ಕಾರಿ ನೌಕರ ಸೇವಾವಧಿಯಲ್ಲಿ ಮೃತಪಟ್ಟರೆ ಅನುಕಂಪದ ಆಧಾರದ ಮೇಲೆ ಅವಲಂಬಿತರಿಗೆ ಉದ್ಯೋಗವನ್ನು ಕೊಡಲಾಗುತ್ತದೆ. ಅವಲಂಬಿತರು ಅರೆಶಿಕ್ಷಿತರಾಗಿದ್ದರೆ ಅಂಥವರಿಗೆ ನಾಲ್ಕನೆ ದರ್ಜೆಯ ಹುದ್ದೆ ಸಿಗುತ್ತದೆ. ಅದು ಸ್ವಚ್ಛಗಾರ ಹುದ್ದೆಯಾಗಿದ್ದು ಅಭ್ಯರ್ಥಿ ಮೇಲ್ಜಾಯವನಾ(ಳಾ)ಗಿದ್ದರೆ ತನ್ನ ಸಂಬಳದ ಅರ್ಧದಷ್ಟು ಹಣವನ್ನು ಕೊಟ್ಟು ಕಸಗುಡಿಸುವ ಜಾತಿಯವನಿಂದಲೇ ಆ ಕೆಲಸವನ್ನು ಮಾಡಿಸುತ್ತಾರೆಯೆ ಹೊರತು ತಾವಾಗಿಯೆ ಮಾಡುವವರಲ್ಲ. ಅದನ್ನು ಜಾತಿಕಾರಣದಿಂದ ಮೇಲಧಿಕಾರಿಗಳು ಸಹಿಸುತ್ತಾರೆ ಕೂಡ. ಅದೊಂದು ಅಲಿಖಿತ ನಿಯಮ. ಕೊಡುಕೊಳ್ಳುವ, ಕೂಡುಣ್ಣುವ ಅಂತರ್ಸಂಬಂಧಗಳಿರಲಿ ಪೂಜಾದಿ ಶೌಚ ಕಾರ್ಯಗಳು ಸೇರಿದಂತೆ ನಮ್ಮ ವೈಯಕ್ತಿಕ ಬದುಕನ್ನು ಜಾತಿಸಂವಿಧಾನ ಹೇಗೆ ನಿಯಂತ್ರಿಸುತ್ತದೆ ಎಂಬುದಕ್ಕೆ ಇದೊಂದು ಉದಾಹರಣೆ.

ತಲೆಯ ಮೇಲೆ ಮಲ ಹೊರುವ ಪದ್ಧತಿ ಇನ್ನೂ ಜಾರಿಯಲ್ಲಿರುವುದು ಸರ್ಕಾರಕ್ಕೆ ತಿಳಿದಿದೆ. ಇದನ್ನು ಆಯಾ ಪ್ರದೇಶದ ಕಾರ್ಪೊರೇಟ್ ಸಂಸ್ಥೆಗಳಿಗೆ ವಹಿಸಿ ತಾಂತ್ರೀಕರಣದ ಮೂಲಕ ಆ ಅನಿಷ್ಟ ಪದ್ಧತಿಯನ್ನು ಕೊನೆಗಾಣಿಸಬಹುದು. ದಲಿತ ಮಹಿಳೆ ಅಡುಗೆ ಮಾಡಿದ ಕಾರಣಕ್ಕೆ ಬಿಸಿಯೂಟ ಉಣ್ಣಲೊಲ್ಲದ ಮಕ್ಕಳಿಗೆ ಸಮಾನತೆಯನ್ನು ಕಲಿಸದ ವಿದ್ಯೆ ವಿದ್ಯೆಯಲ್ಲ ಎಂಬುದನ್ನು ಒತ್ತಿಹೇಳಬೇಕು. ಅದಕ್ಕಾಗಿ ಕಸಗುಡಿಸಲು ಬಳಸಿಕೊಂಡಂತೆ ಪ್ರಭಾವೀ ವ್ಯಕ್ತಿಗಳನ್ನು ಬಳಸಿಕೊಳ್ಳಬಹುದು. ಜಾತಿವ್ಯವಸ್ಥೆ ನಮ್ಮ ಮನಸ್ಸುಗಳನ್ನು ಮಲಿನಗೊಳಿಸಿದೆ. ಆದ್ದರಿಂದ ಮೊದಲು ಜಾತಿಯೆಂಬ ಕಸವನ್ನು ನಮ್ಮ ಮನಸ್ಸಿನಿಂದ ಗುಡಿಸಿಹಾಕಬೇಕು, ಮನದೊಳಗೆ ಮೆತ್ತಿಕೊಂಡಿರುವ ಅಸ್ಪೃಶ್ಯತೆಯೆಂಬ ಮಲವನ್ನು ಬಳಿದು ತೊಳೆಯಬೇಕು. ಅಲ್ಲಿಯವರೆಗೆ ಭಾರತವು ಸ್ವಚ್ಛವಾಗುವುದಿಲ್ಲ. ಭೌತಿಕ ನೈರ್ಮಲ್ಯವೂ ಅತ್ಯಗತ್ಯವೆ. ಅದು ಕಷ್ಟಸಾಧ್ಯವೇನೂ ಅಲ್ಲ. ಯಾವುದೇ ಬಹುರಾಷ್ಟ್ರೀಯ ಕಂಪೆನಿಯ ಅಂಗಳ ಹೊಕ್ಕು ನೋಡಿದರೆ ಅದು ತಿಳಿಯುತ್ತದೆ. ಅದರ ವ್ಯಾಪ್ತಿ ಮತ್ತು ತಿಳಿವಳಿಕೆ ವಿಸ್ತಾರವಾಗಬೇಕು ಅಷ್ಟೆ. ಅದು ಪ್ರತಿಯೊಬ್ಬ ಪ್ರಜೆಯ ಪ್ರಜ್ಞೆಯಲ್ಲಿ ಆಳವಾಗಿ ಬೇರೂರಬೇಕು. ಇಲ್ಲದಿದ್ದರೆ ಅದು ಕೇವಲ ಸಾಂಕೇತಿಕತೆಯಾಗಿಯೇ ಉಳಿಯುತ್ತದೆ ಮತ್ತು ಮರೆವಿಗೆ ಜಾರುತ್ತದೆ.

■ ಮೂಚಿ

## ಮಾತೇ ಮುತ್ತು

★ ಕಾಲವನ್ನು ಉರುಳುತ್ತಿರುವ ವರ್ಷಗಳಲ್ಲಿ ಗಣಿಸಬೇಡಿ. ನೀವೇನು ಮಾಡುತ್ತೀರಿ, ನೀವೇನು ಭಾವಿಸುತ್ತೀರಿ ಮತ್ತು ನೀವೇನು ಸಾಧಿಸುತ್ತೀರಿ ಎನ್ನುವುದರ ಮೂಲಕ ಲೆಕ್ಕಹಾಕಿ.

-ಜವಾಹರಲಾಲ್ ನೆಹರೂ

★ ಕಷ್ಟಗಳು ಕೆಲವರ ವ್ಯಕ್ತಿತ್ವಗಳನ್ನು ಭಗ್ನಗೊಳಿಸುತ್ತವೆ, ಇನ್ನು ಕೆಲವರ ವ್ಯಕ್ತಿತ್ವಗಳನ್ನು ನಿರ್ಮಿಸುತ್ತವೆ. ಒಬ್ಬನ ಆತ್ಮವನ್ನು ಕತ್ತರಿಸಬಲ್ಲ ಯಾವ ಕೊಡಲಿಯೂ ಇಲ್ಲ.

-ನೆಲ್ಸನ್ ಮಂಡೇಲ

★ ಎಲ್ಲರೂ ಅವರವರ ಅರಿವಿನ ಅಂಗಡಿಯನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದಾರೆ. ಅವರವರ ಅರಿವನ್ನು ಮಾರುತ್ತಿದ್ದಾರೆ. ದೀವಟಿಗೆ ಹಿಡಿದು ನನ್ನ ಮನೆಯನ್ನು ಸುಟ್ಟು ಬಂದಿದ್ದೇನೆ. ನಿನ್ನ ಮನೆಯನ್ನೂ ಸುಟ್ಟು ಬಾ.

-ಸಂತ ಕಬೀರ

★ ಕಲೆ ಮಂಜುಗಟ್ಟಿದ ಹೃದಯವನ್ನು ಬಿಸಿ ಮಾಡಬಲ್ಲುದು. ಖಿನ್ನ ಹೃದಯವನ್ನು ಆಧ್ಯಾತ್ಮಿಕ ಅನುಭವಕ್ಕೆ ಒಡ್ಡಬಲ್ಲುದು. ಕೆಲವು ಬಾರಿ ಕಲೆಯ ಮೂಲಕ ನಾವು ತರ್ಕದಿಂದ ಸಾಧ್ಯವಾಗದ ದಿವ್ಯದರ್ಶನವನ್ನು ಅವ್ಯಕ್ತವಾಗಿ ಪಡೆಯಬಹುದು.

-ಅಲೆಗ್ಸಾಂಡರ್ ಸೋಲ್ಜೆನಿಟ್ಸನ್

★ ತರ್ಕವನ್ನೇ ನಂಬುವ ಮನಸ್ಸು ಎರಡು ಅಲಗಿನ ಕತ್ತಿಯಂತೆ. ಅದನ್ನು ಹಿಡಿದವನ ಕೈಯಲ್ಲೂ ರಕ್ತ ಒಸರುತ್ತದೆ.

-ರವೀಂದ್ರನಾಥ ಠ್ಯಾಗೋರ್

★ ಯಶಸ್ಸು ಎಂದರೆ ಉತ್ಸಾಹ ಕಳೆದುಕೊಳ್ಳದೆ ಒಂದು ಸೋಲಿನಿಂದ ಇನ್ನೊಂದು ಸೋಲಿನತ್ತ ತೆರಳುವ ಸಾಮರ್ಥ್ಯ.

-ವಿನ್‌ಸ್ಟನ್ ಚರ್ಚಿಲ್

★ ಮನುಷ್ಯನೆಂದರೆ ತನ್ನೊಳಗೇ ಇರುವ ಒಂದು ವಿಶ್ವ.

-ಬಾಬ್ ಮಾರ್ಲೆ

★ ರಚನಾತ್ಮಕ ಕೆಲಸವಿಲ್ಲದ ಸತ್ಯಾಗ್ರಹ ಕ್ರಿಯಾಪದವಿಲ್ಲದ ವಾಕ್ಯದಂತೆ.

-ರಾಮಮನೋಹರ ಲೋಹಿಯಾ

★ ವಿವಾಹ ಎನ್ನುವುದು ಸಾವು ಇಲ್ಲವೇ ಬದುಕು. ಅದರ ಮಧ್ಯೆ ಎನ್ನುವುದು ಏನೂ ಇಲ್ಲ.

-ಖಲೀಲ್ ಗಿಬ್ರಾನ್

★ ಏಳು ಸಲ ಬೀಳು; ಎಂಟನೇ ಸಲ್ಲ ಎದ್ದು ನಿಲ್ಲು.

-ಜಪಾನೀ ಗಾದೆ

★ ಪ್ರೀತಿ ಒದಗಿಸುವ ನ್ಯಾಯ ಎಂದರೆ ಶರಣಾಗತಿ. ಕಾನೂನು ಕೊಡುವ ನ್ಯಾಯ ಎಂದರೆ ಶಿಕ್ಷೆ.

-ಮಹಾತ್ಮಾ ಗಾಂಧೀಜಿ